ಮತ್ತು ಪೂಜಾರಣ್ಣನ ಸ್ನೇಹದ ಸಲುಗೆಯಿಂದ ಹೀಗೆ ಮಾತು ನಡೆದಿತ್ತು.

ಇದನ್ನು ಕೇಳಿದ ನೆರೆದ ಭಕ್ತರಂತೂ ಅಯ್ಯೋ ಶಿವನ..... ಏನ್ ಮಾರೆಮ್ಮಾ ನಿನ್ನ ಬಗ್ಗೆ, ಅದೂ ಸತ್ಯವತಿ ಮಾರೆಮ್ಮನ ಬಗ್ಗೆನೆ ಹಂಗ ಮಾತಾಡ್ತಾರ ಈ ಹುಚ್ಚುಮುಂಡೇವ್ನಗಳು. ಸ್ವಲ್ಪ ತಿಳುವಳಿಕೆ ಇಲ್ಲವೇನ ಇವಕ್ಕ. ಮಾನ ಮರ್ಯಾದೆ ಇಲ್ಲದಂಗ ಮಾತಾಡ್ತಾವ. ಮೂರು ಬಿಟ್ಟವು ಊರಿಗೆ ಹೆಚ್ಚಾದವು. ಇವುಗಳ ಬಾಯ್ಯಾಗ ಮಣ್ಣ ಹಾಕ. ಸಿದಗಿ ಸಿಂಗಾರ ಆಗ ಅಂತಾ ಒಂದೇ ಸಮನೆ ಮಂಗಳಾರತಿ ಮಾಡ್ತಿದ್ದುದು ನಮ್ಮ ಹಳೇಮನಿ ಫಕ್ಕೀರಮ್ಮ. ಅಂತೂ ಮಾರೆಮ್ಮನ ಗುಡಿ ಒಂದ ರೀತಿಲಿ ಮೆಟ್ರೋ ಟ್ರೈನ್ ಬಂದ ನಿಂತಂಗ. ಮೊಬೈಲ್ ನೆಟ್‌ವರ್ಕ್ ಜಾಮ್ ಆದ್ದಂಗ ಸ್ತಬ್ಧವಾಗಿ ನಿಂತ ಬಿಡ್ತು ಆ ಮೂರಾಸಂಜಿ.

ಆದರೂ ನಿತ್ಯದ ಪಾಳಿ ಬಿಡದ ಪೂಜಾರಣ್ಣ ಅವತ್ತೂ ಹೊರಗಿನ ದೇವತೆಯನ್ನು ಒಳಗೆ ಸೇರಿಸಿಕೊಳ್ಳದೇ. ತನ್ನ ಮಾರೆಮ್ಮನ ಬಗೆಗೆ ನಿಷ್ಠೆಯಿಂದ ಜಪ್ಪಯ್ಯಾ ಎನ್ನದೇ ಗರ್ಭಗುಡಿಯನ್ನು ಆವರಿಸಿ ಕುಳಿತಿದ್ದ. ಲೇ ತಮ್ಮ ರಾಮಣ್ಣ, ಭರಮಪ್ಪ ಬಯ್ಯಲ್ರೇ. ನೀವು ಏನ್ ಮಾತಾಡಿದಿರಿ ಅಂತ ನನಗ ಪಸಂದ ಕೇಳ್ಸದ. ನಿಮ್ಮ ಮನ್ ಕೀ ಬಾತ್ ಅರ್ಥ ಆಗೈತಿ.ಕೇಳ್ರೀ., ನನ್ನದೂ ಮನ್ ಕೀ ಬಾತ್ ಇದೆ. ಇದು ಖರೇ ಖರೇ ಸಂಗ್ಯಾ ಬಾಳ್ಯಾನ ರೀತಿ. ನನಗೂ ಅಚ್ಛಾ ದಿನ ಬರತೈತಿ ನೋಡ್ತಾ ಇರಿ ಅಂತಾ ಮೋದಿ ಸಾಹೇಬರ ಮಾತ ಆಗಲೇ ನನಸು ಮಾಡಿಕೊಂಡವಳಂತೆ ಮಾರೆಮ್ಮ ಪೂಜಾರಣ್ಣ ಬಾಯಲ್ಲಿ ಸೆಲ್ಫಿ ಮಾತನ್ನು ಉಲ್ಲಾಸವಾಗಿ ಮೂಡಿಸಿ ಧೂಪದ ಜೊತೆ ಹೊರಗ್ಹಾಕುತ್ತಿದ್ದಳು.

ನೋಡ್ತಾ ಇರಿ ಮಕ್ಕಳೇ, ಈ ಸ್ಮಾರ್ಟ್ ಸಿಟಿಯೊಳಗೆ ನಂದು ಒಂದ ಪಾಲು ಹೇಗಿರುತ್ತೆ ಅಂತಾ. ನಾನ ಸುಮ್ನ ಕುಂಡ್ರುವ ಮಗಳಲ್ಲ. ಕುಂಡಿಗೆ ಬೆಂಕಿ ಬಿದ್ರೂ ಕೇಳಂಗಿಲ್ಲ. ಗಟ್ಟಿಗಿತ್ತಿ ಅದೀನಿ. ಹೆಣ್ಣನ್ನ ಗಂಡ ಮಾಡ್ತೀನಿ, ಗಂಡನ್ನ ಹೆಣ್ಣ ಮಾಡ್ತೀನಿ. ಇಲ್ಲೇನು ನನ್ನ ಗುಡಿಯಿಂದ ಗಟಾರ ಬಿದ್ದಿತ್ತಲ್ಲ. ಅಲ್ಲಿನಾ ಹಾಲು ತುಪ್ಪದ ಹಳ್ಳ ಹರಿಯುವಂಗ ಮಾಡ್ತೀನಿ. ಆ ಆದಾನಿ ಫಾರಂನ ಆ್ಯಪಲ್ ತಂದು ನೇರ ಪ್ರಸಾದ ಹಂಚತೀನಿ. ಶುದ್ಧ ಗಂಗಾನ ತರತೀನಿ. ನಾನು ದಿಲ್ಲಿ ಸಾಹೇಬರಿಗೆ ಇಲ್ಲಿಂದಲೇ ಆನ್‌ಲೈನ್ ಅರ್ಜಿ ಹಾಕತ್ತೇನಿ. ನಾನು ಸ್ಮಾರ್ಟ್ ಆಗೋಕಾ ಬೇಕ. ನನ್ನ ಜೊತೆನೂ ನೀವ್ ನಿಂತು ಸೆಲ್ಫಿ ತೆಗೆಸಿಕೊಂಡ್ರ ಹೇಗಿರುತ್ತೆ.

ಎಷ್ಟು ದಿನ ಅಂತಾ ಕಣ್ಣು ರಂಜಕ ಮಾಡಿಕೊಂಡು, ಕೈಯಾಗ ಆಯುಧ ಲಿಂಬಿಹಣ್ಣು ಹಿಡಿದುಕೊಂಡು, ನಾಲಿಗೆ ಹೊರಗೆ ಚಾಚಿಕೊಂಡು, ಹಸಗೊಂಡ ಇರಬೇಕು. ಮತ್ತ ಮ್ಯಾಲ್ ನಿಮ್ಮಿಂದ ಬೈಯ್ಸಿಕೊಂಡು ಹೊಗಳ್ಸಿಕೊಂಡು ಹಬ್ಬ ಮಾಡೋ ಹಣೆಬರಹ ನನಗೇನ ಬಂದೈತ್ರೋ. ಅದಕ್ಕೆ ನಾನು ತಯಾರಾಗೆ ನಿಂತೇನಿ. ಕಷ್ಟ ಆಗೈತಿ ಇಲ್ಲಿ. ಇವತ್ತು ಹುಂಡಿ ಇರುತ್ತೆ ನಾಳೆ ಇರಲ್ಲ. ನನ್ನ ಮೈಯಾಗ ಏನೂ ಸಿ.ಸಿ.ಟಿವಿ ಇದೇನಾ? ನಾನೇನು ಎಐನಾ. ನಾನ್ ನಿಜ ಸತ್ಯವತಿ ಅಲ್ವಾ... ಊದುಬತ್ತಿ ಹೋಗಲಿ, ಒಂದೊಂದ ಸಲ ನಮ್ಮ ಪೂಜಾರಪ್ಪಗೆ ಬೀಡಿ ಹಚ್ಚಿಕೊಳ್ಳಾಕ ಕಡ್ಡಿನಾ ಇರೋಲ್ಲ ಅಂತ ಸತ್ಯವತಿ ಮರೆಯಾಗಿ ಹೋಗಿ 'ಪೂಜಾರಿ ನಾಗಣ್ಣ'ನಾಗಿ ಅರ್ಧಂಬರ್ಧಾ ಸತ್ಯ ನುಡಿಯಾಕ ಶುರು ಮಾಡ್ತು.

ಭಕ್ತರು ಏನೋ ಎಡವಟ್ಟು ಆತಲ್ಲಪ್ಪಾ. ತಾಯಿಯಂತ ಮತ್ತೇ ದೀಪ, ಧೂಪ, ಗಂಟೆ ಬಾರಿಸಿ ಅವಳನ್ನು ಸರಿ ದಾರಿಗೆ ತರುತ್ತಿದ್ದರು. ಆದರೂ ಒಂದು ನಮೂನೆಯ ಡೀಸೆಂಟ್ ಮಾತುಗಳನ್ನು ಟೆಂಡರ್ ರೂಪದಲ್ಲಿ ನುಡಿತಾನೇ ಇದ್ದಳು ಈ ಮಾರೆಮ್ಮ. ನೋಡ್ತಾಯಿರಿ ನನ್ನ ಗುಡಿ ಇದು. ಇನ್ನು ಐದಾರು ವರ್ಷಗಳಲ್ಲಿ ಡಿಜಿಟಲ್ ಆಗತೈತಿ. ಮಾರಿ ಮಿಷನನ್ನು 'ಮೇರಿ ಮಿಷನ್' ಮಾಡಿಕೊಂಡು ನಾನು ಬದುಕ್ತೀನಿ. ವೈಫೈ ಇಂಟರ್ ನೆಟ್, ಆನ್‌ಲೈನ್ ಎಲ್ಲವೂ ಇರುತ್ತೆ. ನನಗೂ ಈ ಹಾಳ್ ಹೊಗೆ ಕುಡುದೂ, ಕುಡುದು ಕಣ್ ಮಂಜ ಆಗ್ಯಾದ. ನನ್ನ ಪೂಜಾರಿಗೂ ವಯಸ್ಸಾಗ್ತ ಇದೆ. ನನಗ ನೇರವಾಗಿ ವೈಟ್ ಮನಿನಾ ಬರಬೇಕು. ಇನ್‌ಕಮ್ ಟ್ಯಾಕ್ಸ್ ಕಟ್ಟೋಹಂಗ ಅದು ಇರಬೇಕು.

ಕಾಲ ಹೇಳಾಕ ಬರಲ್ಲಾ ನೋಡು. ನನ್ನ ಮ್ಯಾಲೀನು ಐ.ಟಿ,ಈಡಿ ರೈಡ್ ಮಾಡಿದ್ರಾ, ನಾನು ಸಿದ್ಧಳದೀನಿ. ನಾನು ಲೆಕ್ಕ ಚುಕ್ತಾ ಇಡ್ಕೊಂಡು ವ್ಯವಹಾರ ಮಾಡಾಕಿನಾ. ಯಾಕಂದರ ಮೋದಿ ಸಾಹೇಬರು, ಅವರ ಪಕ್ಕದಲ್ಲಿರುವ ಅಣ್ಣ ಅಮ್ಮನೋರು ನಿನ್ನ ಕಪ್ಪು ಹಣದ ಲೆಕ್ಕ ಕೊಡು ಅಂತಾ ಕೇಳಿದ್ರಾ ಎಲ್ಲಿಂದ ಕೊಡ್ಲಿ. ಬರೀ ಆಧಾರ ಕಾರ್ಡ ತೋರಿಸಿದ್ರಾ ನಡೆಯಂಗಿಲ್ಲ ಬಾಳೇವು ಅನ್ನೋದು ನನಗೂ ಗೊತ್ತದ. ಆ